ಇಂದು ದಿನಾಂಕ : 10-01-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲು: ಅರ್ಜಿದಾರ ಪರ ಶ್ರೀ.ಆರ್.ಕೆ.ಎನ್ ವಕೀಲರಿಂದ**

1. ಕೆ.ಎ.48/ಟಿ.ಎ.6338 ಟ್ರಾಕ್ಟರಗೆ ವಿಮೆ ಇದೆ ಎಂದರೆ ಸಾಕ್ಷಿ ಇಂಜಿನಗೆ ಇದೆ ಎಂದು ಹೇಳುತ್ತಾರೆ. ಸದರಿ ಟ್ಯಾಕ್ಟರಗೆ ಟ್ರೇಲರ ಇದ್ದವು ಎಂದರೆ ಸರಿ. ಟ್ರ್ಯಾಕ್ಟರ ಇಂಜಿನ ಸಹಾಯದಿಂದ ಟ್ರೇಲರ ಓಡುತ್ತವೆ ಎಂದರೆ ಸರಿ. ಟ್ಯಾಕ್ಟರ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸಾಕ್ಷಿ ಟ್ರೇಲರದಿಂದ ಅಪಘಾತವಾಗಿದೆ ಎಂದು ಹೇಳುತ್ತಾರೆ. ದ್ವಿಚಕ್ರ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಅನ್ನುವುದು ಸರಿಯಲ್ಲ. ದ್ವಿಚಕ್ರ ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಧನ ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತಪಟ್ಟ ವ್ಯಕ್ತಿಗೆ ಪರಿಹಾರ ಕೊಡಲು ನಮ್ಮ ವಿಮಾ ಕಂಪನಿ ಬಾದ್ಯಸ್ಥ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೆ. ಸರಿ ಅದೆ.

ಸಹಿ/-

ಸದಸ್ಯರು ಮೋ.ವಾ.ಅ.ಮಂಡಳಿ-5,
ಜಮಖಂಡಿ.

ಸಾಕ್ಷಿಯ ಸಹಿ